


ಎಡದಿಂದ ಬಲಕ್ಕೆ:

1. ದಾಸಿಯರನ್ನ ಕಂಡರೇ ಎಂಥ ತಾತ್ಸಾರ! (4)
3. ಆದರ ತೋರಲಿಲ್ಲವೆಂಬ ಕೋಪಕ್ಕೆ ನಡುಕ ನೋಡಿ (3)
4. ತಕ್ಷಣದ ಕಾಲಮಾನ ಅಲ್ಪ–ಅಶಾಶ್ವತ (3)
6. ಸಂಪಾದನೆಯಲ್ಲಿ ಎಲ್ಲರಿಗೂ ಹೆಚ್ಚು–ಕಡಿಮೆ ಇಲ್ಲದಂತೆ ಭಾಗ (4)
7. ಕೋತಿಯನ್ನ ಸಾಕಿದ ಘಟನೆಯ ವಿಸ್ತಾರ ವಿವರ (4)
9. ಯಾರ ಸರಹದ್ದಿನಲ್ಲೇ ಇದ್ದರೂ ಎಲ್ಲ ಭೂಮಿಯಲ್ಲಿ ಹುಟ್ಟಿದ್ದೇ ತಾನೇ? (4)
12. ಇಷ್ಟೊಂದು ಅಪಸ್ವರಗಳಿಗೆ ಕಾರಣ ಬರೀ ಆತುರ (4)
14. ರಕ್ಕಸನ ಮನೆಯಲ್ಲಿ ಹಿಂದು ಮುಂದಾದ ಮೊಸಳೆಯೇ? (3)
15. ಪುಸ್ತಕಗಳನ್ನೆಲ್ಲ ಹೊರಲು ತಕ್ಕದ್ದು ತಲೆ (3)
16. ಪಾತಾಳದಿಂದ ಮೇಲೆದ್ದ ದಂಡನಾಯಕ (4)

ಮೇಲಿಂದ ಕೆಳಕ್ಕೆ:

1. ಯಾವ ಊರಿನಲ್ಲೂ ಬೇಕೇ ಬೇಕು ಇಂಧನ (4)
2. ತಾರೆಯ ಕಡೆಗೇ ಹೋದರೂ ಬಿಡದೆ ಬೆನ್ನೇರುವವ (4)
3. ಅದಮ್ಯ ಆಸೆಗಳ ಅತಿ ಕೀಳು ಮನುಷ್ಯ (3)
5. ಆ ಕವನದ ವಿಷಯ ಒಂದು ಯುದ್ಧ (3)
6. ಸಂಗಡಿಗರೆಲ್ಲ ಒಂದೆಡೆ ಸೇರಿದ್ದೇ ಭಾರೀ ಸಂಭ್ರಮ (4)
8. ಬೆಳಕನ್ನು ತೋರಿದವರದೂ ಇಂತಹದೇ ಶರೀರ (4)
10. ಅಲ್ಲಿ ಸೇರಿದವರ ಸಂಖ್ಯೆ ಹತ್ತು ಮಡಿ ನೂರು (3)
11. ಹಣ್ಣು ಹಣ್ಣು ಮುದುಕನಾದರೂ ದುಡ್ಡಿನ ಅಹಂಕಾರ (4)
12. ತಿಮ್ಮನಿಗೆ ಬೇಕೇ ಬೇಕು ಅಮ್ಮನ ಒಪ್ಪಿಗೆ (4)
13. ಅಲ್ಲಿರುವ ಪುಸ್ತಕಗಳದು ಏಳು ಏಳರ ಗುಂಪು (3)

## ಪದಬಂಧ: 29-7-2010ರ ಉತ್ತರಗಳು

ಎಡದಿಂದ ಬಲಕ್ಕೆ:
1. ಉರಗ; 3. ಸುರುಚಿ; 4. ಟಾಕೀಸು; 6. ತತ್ತರ; 7. ಸಮಾನತೆ; 9. ಗಮನಿಸು; 11. ಲೆಕ್ಕಣಿಕೆ; 13 ರವಿವಾರ; 15. ರಕಮು; 17. ಧರಿಸಿ; 18. ಸುಗಂಧ; 19. ಕಲಕು.
ಮೇಲಿಂದ ಕೆಳಕ್ಕೆ:
1. ಉಚಿತ; 2. ಗಟಾರ; 3. ಸುಮನ; 5. ಸುಗಮ; 7. ಸರಮಾಲೆ; 8. ತೆಗಳಿಕೆ; 9. ಗಡಿಯಾರ; 10. ಸುಧಾಕರ; 12. ಣಿರಧ ('ಧರಣಿ' ತಲೆಕೆಳಗು); 14. ವಿರೋಧ; 15. ರಸಿಕ; 16. ಮುಸುಕು.

# ಪ್ರದೇಶ ವಿಶೇಷ

## 'ಆರ್ಕ್‌ಟಿಕ್' –ಏನು ವಿಶೇಷ?

'ಆರ್ಕ್‌ಟಿಕ್'– ಅದು ನಮ್ಮ ಧರೆಯ 'ಶಿರ'ದಂತಿರುವ ಪ್ರದೇಶ. ಆರ್ಕ್‌ಟಿಕ್‌ನ ಪ್ರಥಮ ವಿಶೇಷ ಏನೆಂದರೆ ಅದು ನೆಲ ಮತ್ತು ಸಾಗರ ಎರಡನ್ನೂ ಒಳಗೊಂಡಿರುವ ಏಕೈಕ ಪ್ರದೇಶ. ಭೂಮಿಯ 'ಉತ್ತರ ಧ್ರುವ' ಈ ಪ್ರದೇಶದಲ್ಲೇ ಇರುವುದು ಅದರ ದ್ವಿತೀಯ ವಿಶೇಷ.

ಆರ್ಕ್‌ಟಿಕ್‌ನ ಪ್ರಧಾನ ಭಾಗ–ಅದೊಂದು ಮಹಾಸಾಗರ. 'ಆರ್ಕ್‌ಟಿಕ್ ಸಾಗರ' ಎಂದೇ ಅದರ ಹೆಸರು. ಏಷಿಯ, ಉತ್ತರ ಅಮೆರಿಕ ಮತ್ತು ಯೂರೋಪ್ ಖಂಡಗಳ ಉತ್ತರ ತೀರಗಳಿಂದಲೂ, ಅಸಂಖ್ಯ ದ್ವೀಪಗಳಿಂದಲೂ ಸುತ್ತುವರಿದಿರುವ ಈ ಮಹಾಸಾಗರದ ವಿಸ್ತಾರ ಒಂದು ಕೋಟಿ ನಲವತ್ತೆರಡು ಲಕ್ಷ ಚದರ ಕಿಲೋಮೀಟರ್. ಸರಾಸರಿ ಹತ್ತು ಸಾವಿರ ಅಡಿ ಆಳ ಇರುವ ಆರ್ಕ್‌ಟಿಕ್ ಸಾಗರದ ಮೇಲ್ಮೈನ ಬಹುಪಾಲು ಇಡೀ ವರ್ಷ ಆರರಿಂದ ಹತ್ತು ಅಡಿ ದಪ್ಪದ ಹಿಮದ ಪದರದಿಂದ ಮುಚ್ಚಲ್ಪಟ್ಟಿರುತ್ತದೆ. ಭೌಗೋಳಿಕವಾಗಿ 66 ಡಿಗ್ರಿ 32 ನಿಮಿಷ ಉತ್ತರ ಅಕ್ಷಾಂಶದಿಂದ ಮೇಲಿನ ಎಲ್ಲ ಪ್ರದೇಶವೂ ಆರ್ಕ್‌ಟಿಕ್‌ಗೇ ಸೇರಿರುವುದರಿಂದ ಇಡೀ ಗ್ರೀನ್ ಲ್ಯಾಂಡ್ ಮತ್ತು ಐಸ್‌ಲ್ಯಾಂಡ್‌ನ ಬಹುಭಾಗ ಆರ್ಕ್‌ಟಿಕ್‌ಗೇ ಸೇರಿವೆ. ಧರೆಯ ಅತ್ಯಂತ ದೊಡ್ಡ



ದ್ವೀಪವಾಗಿರುವ ಗ್ರೀನ್ ಲ್ಯಾಂಡ್ ಹದಿನೆಂಟೂವರೆ ಲಕ್ಷ ಚದರ ಕಿ.ಮೀ. ವೈಶಾಲ್ಯ ಹೊಂದಿದ್ದು ಸಂಪೂರ್ಣವಾಗಿ ಎರಡು ಕಿ.ಮೀ. ದಪ್ಪದ ಗಟ್ಟಿ ಹಿಮ ಹಾಸಿನಿಂದ ಶಾಶ್ವತವಾಗಿ ಆವರಿಸಲ್ಪಟ್ಟಿದೆ.

ಆರ್ಕ್‌ಟಿಕ್ ಒಂದು ಶೀತಲ ಮರುಭೂಮಿ. ಅಲ್ಲಿನ ಅತಿ ಬಿಸಿಯ ಉಷ್ಣತೆಯೇ ಶೂನ್ಯಕ್ಕಿಂತ ಒಂದು ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ. ಅಲ್ಲಿನ ಚಳಿಗಾಲದ ಉಷ್ಣತೆ ಶೂನ್ಯಕ್ಕಿಂತ ಮೂವತ್ತೈದು ಡಿಗ್ರಿ ಕಡಿಮೆ. ಧರೆಯ ಸಾಗರ ಪ್ರವಾಹಗಳ ಸಂಚಲನದಲ್ಲಿ ವಾಯು ಮಂಡಲದ ಪರಿಚಲನೆಯಲ್ಲಿ ಆರ್ಕ್‌ಟಿಕ್‌ನದು ತುಂಬ ಮಹತ್ವದ ಪಾತ್ರ.

ಇಷ್ಟೆಲ್ಲ ದುಸ್ತರ ಪರಿಸರವನ್ನು ಹೊಂದಿದ್ದರೂ ಆರ್ಕ್‌ಟಿಕ್ ವಿಶಿಷ್ಟ ಜೀವಜಾಲವನ್ನು ಧರಿಸಿದೆ. ಹಿಮಕರಡಿ, ಹಿಮನರಿ ಮುಂತಾದ ಹಲವಾರು ಬೇಟೆಗಾರ ಪ್ರಾಣಿಗಳಿಂದ ಆರಂಭಿಸಿ ಕ್ಯಾಂಬೂಗಳವರೆಗೆ ಆರ್ಕ್‌ಟಿಕ್‌ನ ಹಿಮ ಸಾಮ್ರಾಜ್ಯದಲ್ಲಿ ಮತ್ತು ಅಲ್ಲಿನ ತಂಡ್ರಾ ಹುಲ್ಲುಬಯಲಿನಲ್ಲಿ ಜೀವಜಾಲ ನಿಬಿಡವಾಗಿ ಹರಡಿದೆ.

ಇನ್ನೂ ವಿಶೇಷ ಏನೆಂದರೆ ಆರ್ಕ್‌ಟಿಕ್‌ನಲ್ಲಿ ಮನುಷ್ಯರೂ ಇದ್ದಾರೆ: ಗ್ರೀನಲ್ಯಾಂಡ್‌ನಲ್ಲಿ 'ಎಸ್ಕಿಮೋ'ಗಳು, ಅಲಾಸ್ಕಾದಲ್ಲಿ 'ಅಲ್ಯೂಟ್' ಜನ, ಸ್ಕ್ಯಾಂಡಿನೇವಿಯಾದಲ್ಲಿ 'ಲ್ಯಾಪ್' ಜನ ಹಾಗೂ ಈಶಾನ್ಯ ಸೈಬೀರಿಯಾದಲ್ಲಿ 'ಚುಕ್ಚಿ' ಜನ ಶತಮಾನಗಳಿಂದ ನೆಲೆಸಿದ್ದಾರೆ. ಅಲ್ಲಿನ ಪ್ರಾಣಿಗಳನ್ನೇ ಬೇಟೆಯಾಡುತ್ತ ಆ ಶೀತಲ ಲೋಕದಲ್ಲೇ ನೆಮ್ಮದಿಯಿಂದ ಬಾಳುತ್ತಿದ್ದಾರೆ!

■ ಎನ್. ವಾಸುದೇವ್